**ದುಡಿಯುವ ಮಕ್ಕಳ ಹಾಗೂ ವಲಸೆ ಕಾರ್ಮಿಕರ ಮಕ್ಕಳ ಪ್ರಣಾಳಿಕೆಗಳು**
**ಕರ್ನಾಟಕ ರಾಜ್ಯ ವಿಧಾನಸಭೆ ಚುನಾವಣೆ – 2018**

***ಸಲ್ಲಿಕೆ: ಭೀಮಾ ಸಂಘ (ದುಡಿಯುವ ಮಕ್ಕಳ ಸಂಘ) ಉಡುಪಿ, ಬಳ್ಳಾರಿ ಮತ್ತು ಬೆಂಗಳೂರು***
*ಸೌಕರ್ಯಕಾರರು: ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್*

**ಹಿನ್ನೆಲೆ:**

ದುಡಿಯುವ ಮಕ್ಕಳ ಸಂಘಟನೆಯಾದ ಭೀಮಾಸಂಘವು ದುಡಿಯುವ ಮಕ್ಕಳ ರಾಷ್ಟ್ರೀಯ ಚಳುವಳಿ, ಏಷ್ಯಾ ವಲಯದ ಚಳುವಳಿ ಮತ್ತು ಅಂತರ್‍ರಾಷ್ಟ್ರೀಯ ಚಳುವಳಿಯ ಸಂಸ್ಥಾಪಕ ಸಂಘಟನೆಯಲ್ಲಿ ಒಂದಾಗಿದೆ. ಇದು 1990ರಿಂದಲೇ ನಮ್ಮ ದೇಶದಲ್ಲಿ ಕಾರ್ಯನಿರ್ವಹಿಸುತ್ತಿದೆ. ಭೀಮಾ ಸಂಘದ ನಾಯಕತ್ವವು ದುಡಿಯುವ ಮಕ್ಕಳಿಗೆ ಸಂಬಂಧಿಸಿದಂತೆ ಸ್ಥಳೀಯ ಸರ್ಕಾರದಿಂದ ಪ್ರಾರಂಭಗೊಂಡು ಎಲ್ಲಾ ಹಂತದ ಸರ್ಕಾರಗಳ ನಿರ್ಣಯಕಾರರೊಂದಿಗೆ, ನೀತಿ–ನಿಯಮ ರೂಪಿಸುವವರೊಂದಿಗೆ, UN ಮತ್ತು ILOದಂತಹ ಅಂತರ್‍ರಾಷ್ಟ್ರೀಯ ಮಟ್ಟದ ನೀತಿ–ನಿಯಮಗಳನ್ನು ರೂಪಿಸುವ ಏಜೆನ್ಸಿಗಳೊಂದಿಗೆ ಸಕ್ರೀಯವಾಗಿ ತೊಡಗಿಸಿಕೊಳ್ಳುವುದನ್ನು ಒಳಗೊಂಡಿದೆ. ಕಳೆದ ಹಲವಾರು ವರ್ಷಗಳಲ್ಲಿ ಈ ಸಂಘಟನೆಯ ಸದಸ್ಯರು ವೈಯಕ್ತಿಕವಾಗಿ ಹಾಗೂ ಒಟ್ಟಾಗಿ ಅವರ ಹಕ್ಕುಗಳನ್ನು ಸಾಧಿಸುವಲ್ಲಿ, ಸಾಕಾರಗೊಳಿಸಿಕೊಳ್ಳುವಲ್ಲಿ ತಮ್ಮ ಧ್ವನಿ ಎತ್ತಿದ್ದಾರೆ.

ಈ ಮುಂದೆ ಹೇಳಿರುವ ವಿಷಯಗಳು ಉಡುಪಿ, ಬಳ್ಳಾರಿ ಹಾಗೂ ಬೆಂಗಳೂರು ಜಿಲ್ಲೆಯಲ್ಲಿರುವ ಭೀಮಾ ಸಂಘದ ಸದಸ್ಯರಾದ 600ಕ್ಕೂ ಹೆಚ್ಚು ಮಕ್ಕಳ ಪ್ರತಿನಿಧಿಗಳಾಗಿ 150ಕ್ಕೂ ಹೆಚ್ಚು ಮಕ್ಕಳು ಅಲ್ಲಲ್ಲಿ ಸೇರಿ, ತಮ್ಮ ತಮ್ಮ ಪರಿಸ್ಥಿತಿಗೆ ಅನುಗುಣವಾಗಿ ಚರ್ಚಿಸಿ, ದೇಶದ ಪ್ರಜೆಗಳಾದ ತಮ್ಮ ಹಕ್ಕುಗಳನ್ನು ಅರಿತು, ಅದನ್ನು ಸಾಕಾರಗೊಳಿಸಿಕೊಳ್ಳುವಲ್ಲಿ ಅದಕ್ಕನುಗುಣವಾಗಿ ಆಗಬೇಕಾದ ಬದಲಾವಣೆಗಳ ಬಗ್ಗೆ ಆಲೋಚಿಸಿ, ಒಟ್ಟಾಗಿ ತಯಾರಿಸಿದ ಪ್ರಣಾಳಿಕೆಯಾಗಿದೆ. ಕರ್ನಾಟಕ ರಾಜ್ಯ ವಿಧಾನಸಭೆಯ ಚುನಾವಣೆಯ ಈ ಸಂದರ್ಭದಲ್ಲಿ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿಯಲು ಚುನಾವಣಾ ಕಣದಲ್ಲಿ ಸ್ಪರ್ಧಿಸಲಿರುವ ಯಾವುದೇ ವ್ಯಕ್ತಿ, ಅಭ್ಯರ್ಥಿ, ಪಕ್ಷಗಳು ಒಂದೊಮ್ಮೆ ತಾವು ಚುನಾವಣೆಯಲ್ಲಿ ಆಯ್ಕೆಯಾಗಿ ಬಂದರೆ, ರಾಜ್ಯದ ನೀತಿ–ನಿಯಮಗಳನ್ನು ರೂಪಿಸುವಾಗ, ವಿವಿಧ ವಲಯಗಳಿಗೆ, ಗುಂಪುಗಳಿಗೆ ಕಾರ್ಯಕ್ರಮ–ಯೋಜನೆಗಳನ್ನು ತಯಾರಿಸುವಾಗ ದುಡಿಯುವ ಮಕ್ಕಳ ವಲಯಕ್ಕೆ ಪ್ರಥಮ ಆದ್ಯತೆ ನೀಡಿ ಪರಿಗಣಿಸಲೇಬೇಕಾದಂತಹ ವಿಷಯಗಳನ್ನು ರಾಜ್ಯದ ಎಲ್ಲಾ ದುಡಿಯುವ ಮಕ್ಕಳ ಪರವಾಗಿ ಉಡುಪಿ, ಬಳ್ಳಾರಿ ಮತ್ತು ಬೆಂಗಳೂರು ಜಿಲ್ಲೆಯ ಭೀಮಾಸಂಘದ ಸದಸ್ಯರು ಮಾಡುತ್ತಿರುವ ಸಲ್ಲಿಕೆ ಇದಾಗಿದೆ.

ದೇಶದ ಗೌರವಯುತ, ಪ್ರಜ್ಞಾವಂತ ನಾಗರಿಕರಾದ ಮಕ್ಕಳು, ತಮ್ಮ ಹಕ್ಕುಗಳ ಸಾಕಾರಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸುವ ಎಲ್ಲಾ ಪಕ್ಷಗಳ/ಸ್ವತಂತ್ರ ಅಭ್ಯರ್ಥಿಗಳನ್ನು ಅವರವರ ಜವಾಬ್ದಾರಿ ಮತ್ತು ಉತ್ತರದಾಯಿತ್ವವನ್ನು ಸ್ಪಷ್ಟವಾಗಿ ಪ್ರಮಾಣೀಕರಿಸುವಂತೆ ಹಾಗೂ ತಮ್ಮ ಏಳ್ಗೆಗಾಗಿ ಅವರ ಬದ್ಧತೆಯನ್ನು ಸ್ಪಷ್ಟಪಡಿಸುವಂತೆ ಈ ಮೂಲಕ ಒತ್ತಾಯಿಸಿದ್ದಾರೆ. ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯುವಲ್ಲಿ, ದುಡಿಯುವ ಮಕ್ಕಳಿಗೆ ಅವರ ಪರಿಸ್ಥಿತಿಯನ್ನು ಗಮನಿಸಿ ಅವರಿಗೆ ಪೂರಕವಾದ, ಸರ್ವತೋಮುಖ ಏಳ್ಗೆಗೆ ಸಹಕಾರಿಯಾಗುವಂತಹ ಸ್ನೇಹಿ ವಾತಾವರಣವನ್ನು ರೂಪಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಬೇಕೆಂದು, ಆ ನಿಟ್ಟಿನಲ್ಲಿ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳು ಈ ಕೆಳಗಿನ ಅವರ ಹಕ್ಕೊತ್ತಾಯಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

**ದುಡಿಯುವ ಮಕ್ಕಳ ಬೇಡಿಕೆಗಳು:**

- **ದುಡಿಯುವ ಮಕ್ಕಳಾದ ನಮ್ಮ ಮೇಲಿನ ಭೇದಭಾವ ನಿಲ್ಲಬೇಕು:** ಶಾಲೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಕೆಲಸ ಮಾಡುವ ಜಾಗದಲ್ಲಿ ನಮ್ಮ ಮೇಲಾಗುವ ಭೇದಭಾವ ನಿಲ್ಲಬೇಕು. ನಮ್ಮ ಸಲುವಾಗಿ ಯಾವುದೇ ಕಾನೂನು–ನೀತಿ ಮಾಡುವಾಗ ಯಾವುದೇ ಪಕ್ಷ ರಾಜಕೀಯವಿಲ್ಲದೇ ನಮ್ಮ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ನೀತಿ–ನಿಯಮ ರೂಪಿಸಬೇಕು.
- **ನಮ್ಮ ಜೀವನ ನಡೆಸಲು ಸಹಾಯವಾಗುವಂತಹ ಅಪಾಯಕಾರಿಯಲ್ಲದ ಕೆಲಸ ಮಾಡಲು ಪ್ರೋತ್ಸಾಹ ಸಿಗಬೇಕು:** ಕೆಲಸ ಮಾಡುವ ಮಕ್ಕಳನ್ನು ಅಪರಾಧಿಗಳಂತೆ ಕಾಣುವ ವಾತಾವರಣ ಬದಲಾಗಬೇಕು. ನಮ್ಮ ಜೀವನ ನಡೆಸಲು

ಸಹಾಯವಾಗುವ, ನಮಗೆ ಸಾಧ್ಯವಿರುವ, ಯಾವುದೇ ರೀತಿಯಲ್ಲಿ ಅಪಾಯಕಾರಿಯಲ್ಲದ, ಕೆಲಸಗಳನ್ನು 14 ವರ್ಷ ಮೇಲ್ಪಟ್ಟ ನಾವು ಸ್ವಂತ ಇಚ್ಛೆಯಿಂದ ಮಾಡುತ್ತಿದ್ದರೆ, ಅದಕ್ಕೆ ಪ್ರೋತ್ಸಾಹ ಸಿಗುವಂತಾಗಬೇಕು.

- **'ದಾಳಿ ಮತ್ತು ರಕ್ಷಣೆ' ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆ ನಿಲ್ಲಬೇಕು:** 14 ವರ್ಷ ಮೇಲ್ಪಟ್ಟ ನಾವು ನಮ್ಮ ಜೀವನ ನಡೆಸಲು ಸಹಾಯವಾಗುವ ಕೆಲಸಗಳನ್ನು ನಾವು ಸ್ವ-ಇಚ್ಛೆಯಿಂದ ಮಾಡುತ್ತಿರುವಾಗ ಇಲಾಖೆಯವರು ನಮ್ಮನ್ನು ರಕ್ಷಿಸುವ ಹೆಸರಿನಲ್ಲಿ ನಮ್ಮನ್ನು ಹಿಡಿದುಕೊಂಡು ಹೋಗಿ ಯಾವುದೋ ಬಾಲಮಂದಿರ, ಸ್ಟೇಟ್ ಹೋಮ್‌ಗಳಿಗೆ ಕಳುಹಿಸಬಾರದು. ಬದಲಿಗೆ, ನಾವು ಕೆಲಸ ಮಾಡುತ್ತಿರುವ ನಿಜವಾದ ಕಾರಣಗಳನ್ನು ನಮ್ಮೊಂದಿಗೆ ಚರ್ಚಿಸಿ, ಅರ್ಥಮಾಡಿಕೊಳ್ಳಬೇಕು. ಅದಕ್ಕೆ ಸರಿಯಾಗಿ ನಮಗೆ ಸಹಕರಿಸಬೇಕು. ಬೇರೆಯವರ ಒತ್ತಾಯಕ್ಕೆ ಕೆಲಸ ಮಾಡುತ್ತಿದ್ದರೆ, ಅಂತಹ ಮಕ್ಕಳ ಜೊತೆ ಚರ್ಚಿಸಿ, ಅವರ ಇಷ್ಟದಂತೆ ಅಗತ್ಯವಿರುವ ರಕ್ಷಣೆ ನೀಡಬೇಕು. ಇದಕ್ಕೆ ಸರಿಯಾಗಿ ರಾಜ್ಯದ ನೀತಿ-ನಿಯಮ ರಚಿಸಬೇಕು.
- **ಜೀವನ ನಡೆಸಲು ಬೇಕಾದ ಕೌಶಲ್ಯ ನಮಗೆ ಸಿಗಬೇಕು:** ಈಗ ನಮಗೆ ಸಿಗುತ್ತಿರುವ ಶಿಕ್ಷಣ ನಮ್ಮ ಜೀವನ ನಡೆಸಲು ಬೇಕಾದ ಯಾವುದೇ ಕೌಶಲ್ಯವನ್ನೂ ಕೊಡುತ್ತಿಲ್ಲ. ಇಂತಹ ಶಿಕ್ಷಣದಲ್ಲಿ ಆಸಕ್ತಿ ಇಲ್ಲದ ನಮ್ಮಂತಹ ಮಕ್ಕಳಿಗೆ, ಜೀವನ ನಡೆಸಲು ಸಹಾಯವಾಗಿ ನಮ್ಮ ಆಸಕ್ತಿಯ ಶಿಕ್ಷಣ ಸಿಗುವಂತಾಗಬೇಕು. ಸ್ವ-ಉದ್ಯೋಗ ತರಬೇತಿ ಎಲ್ಲಾ ಕಡೆ ಸಿಗುವಂತಾಗಬೇಕು.
- **ಕೆಲಸ ಮಾಡುವ ಸ್ಥಳದಲ್ಲಿ ಸೂಕ್ತ ರಕ್ಷಣೆ ಸಿಗಬೇಕು:** 14 ವರ್ಷ ಮೇಲ್ಪಟ್ಟ ನಮಗೆ ನಮ್ಮ ಕೆಲಸಕ್ಕೆ ಸರಿಯಾದ ಸಂಬಳ ಸಿಗುವಂತಾಗಬೇಕು. ಕುಟುಂಬದ ಪರಿಸ್ಥಿತಿಯಿಂದಾಗಿ ಜೀವನ ನಡೆಸುವುದು ಕಷ್ಟವಾಗಿರುವುದರಿಂದ ಕೆಲಸಕ್ಕೆ ಹೋಗುವ ನಮಗೆ ಅಲ್ಲಿ ಯಾವುದೇ ರೀತಿಯ ಶೋಷಣೆ, ಭೇದಭಾವ ಉಂಟಾಗಬಾರದು. ನಮ್ಮ ಮೇಲೆ ಯಾವುದೇ ರೀತಿಯ, ಮಾನಸಿಕ, ದೈಹಿಕ, ಆರ್ಥಿಕ ಶೋಷಣೆಯಾಗದಂತೆ, ಹಾನಿಯಾಗದಂತೆ ರಕ್ಷಣೆ ಸಿಗಬೇಕು. ಅಲ್ಲದೇ ನಮ್ಮ ಕೌಶಲ್ಯ ಹೆಚ್ಚಿಸಿಕೊಳ್ಳುವ ವಾತಾವರಣ ಅಲ್ಲಿರಬೇಕು. ಕೆಲಸದ ಮಧ್ಯೆ ಅಗತ್ಯವಿದ್ದಾಗ ವಿಶ್ರಾಂತಿಗೆ ಅವಕಾಶವಿರಬೇಕು ಹಾಗೂ ಸ್ವಚ್ಛ, ಗಾಳಿ-ಬೆಳಕುಗಳಿಂದ ಕೂಡಿದ ವಿಶ್ರಾಂತಿ ಕೊಠಡಿ ಹಾಗೂ ಶೌಚಾಲಯದ ವ್ಯವಸ್ಥೆ ಇರಬೇಕು. ಕೆಲಸ ಮಾಡುತ್ತಿರುವ ನಮಗೆ ಅಗತ್ಯ ಜೀವವಿಮೆ, ಅಪಘಾತವಿಮೆಯನ್ನು ಕೆಲಸ ನೀಡಿದ ಮಾಲಿಕರು ಕಡ್ಡಾಯವಾಗಿ ಮಾಡಿಸುವಂತಾಗಬೇಕು. ಸರ್ಕಾರದಿಂದ ಕಾರ್ಮಿಕರಿಗೆ ಸಿಗುವ ಎಲ್ಲಾ ಸೌಲಭ್ಯಗಳು ನಮಗೂ ಸಿಗಬೇಕು.
- **ಮಕ್ಕಳ ಸಹಾಯವಾಣಿ ವ್ಯವಸ್ಥೆ:** ಕೆಲಸ ಮಾಡುವ ಸ್ಥಳದಲ್ಲಿ ಯಾವುದೇ ರೀತಿಯ ಶೋಷಣೆ ನಡೆಯುತ್ತಿದ್ದರೆ, ಅದರಿಂದ ರಕ್ಷಿಸಿಕೊಳ್ಳುವ ಸಲುವಾಗಿ ಸಂಬಂಧಪಟ್ಟವರಿಗೆ ಮಾಹಿತಿ ನೀಡಲು, ನಮ್ಮ ಯಾವುದೇ ಸಮಸ್ಯೆಗಳಿಗೆ ತಕ್ಷಣಕ್ಕೆ ಪ್ರತಿಕ್ರಿಯಿಸಲು ನಮಗೆ ಅಗತ್ಯವಾದ ಮಾಹಿತಿಯನ್ನು ತಕ್ಷಣ ಕೊಡಲು ಎಲ್ಲಾ ಕಡೆಗಳಲ್ಲಿ ಮಕ್ಕಳ ಸಹಾಯವಾಣಿ ಕಡ್ಡಾಯವಾಗಿ ಆಗಲೇಬೇಕು.
- **ದುಡಿಯುವ ಮಕ್ಕಳೊಂದಿಗೆ ಚರ್ಚಿಸಿ, ನಮ್ಮ ಅಭಿಪ್ರಾಯದಂತೆ ನಮಗೆ ಸಂಬಂಧಿಸಿದ ಯೋಜನೆ, ನೀತಿ ರಚಿಸಬೇಕು:** ದುಡಿಯುವ ಮಕ್ಕಳಾದ ನಮ್ಮ ಬಗ್ಗೆ ಯಾವುದೇ ಕಾರ್ಯಕ್ರಮ, ಯೋಜನೆ ಹಾಕಿಕೊಳ್ಳುವಾಗ, ನೀತಿ-ನಿಯಮಗಳನ್ನು ರೂಪಿಸುವಾಗ, ತಪ್ಪದೇ ನಮ್ಮೊಡನೆ ಚರ್ಚಿಸಿ, ನಮ್ಮ ಪರಿಸ್ಥಿತಿ, ಸಮಸ್ಯೆ, ಅಗತ್ಯತೆಗಳನ್ನು ಅರ್ಥಮಾಡಿಕೊಂಡು, ನಮ್ಮ ಸಲಹೆ, ಅಭಿಪ್ರಾಯ, ಶಿಫಾರಸ್ಸುಗಳ ಆಧಾರದ ಮೇಲೆ ಅಂತಹ ಕಾರ್ಯಕ್ರಮ, ಯೋಜನೆ, ನೀತಿ-ನಿಯಮಗಳನ್ನು ಮಾಡಬೇಕು.
- **ಮಕ್ಕಳ ಗ್ರಾಮ ಸಭೆ:** ರಾಜ್ಯದಾದ್ಯಂತ ಮಕ್ಕಳ ಗ್ರಾಮ ಸಭೆ ಕಡ್ಡಾಯವಾಗಿ ನಡೆಯಲೇಬೇಕು. ಹಾಗೂ ಈ ಮಕ್ಕಳ ಗ್ರಾಮ ಸಭೆಯಲ್ಲಿ ದುಡಿಯುವ ಮಕ್ಕಳಾದ ನಮಗೆ ನಮ್ಮ ಸಮಸ್ಯೆಗಳನ್ನು ಚರ್ಚಿಸಲು ಪ್ರತ್ಯೇಕ ಅವಕಾಶವಿರಬೇಕು. ಅಲ್ಲದೇ ಇಂತಹ ಗ್ರಾಮ ಸಭೆಗಳು, ನಮ್ಮ ಅನುಕೂಲಕರ ಸಮಯ, ಸ್ಥಳ, ದಿನಗಳನ್ನು ಗಮನಿಸಿ ನಡೆಸುವಂತಾಗಬೇಕು. ನಾವು ಕೆಲಸಕ್ಕೆ ಹೋಗುವುದರಿಂದ ಎಲ್ಲಾ ದಿನಗಳಲ್ಲಿ, ಎಲ್ಲಾ ಸಮಯದಲ್ಲಿ ಈ ಸಭೆಗೆ ನಮಗೆ ಬರಲು ಸಾಧ್ಯವಾಗುವುದಿಲ್ಲ. ನಮ್ಮದೇ ಆದ ಸಮಸ್ಯೆಗಳನ್ನು, ವಿಷಯಗಳನ್ನು ಚರ್ಚಿಸಲು ನಮಗೆ ಸೂಕ್ತ ವೇದಿಕೆ ಬೇಕು. ಇಂತಹ ಚರ್ಚೆಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ತಪ್ಪದೇ ಹಾಜರಿದ್ದು ನಮ್ಮ ವಿಷಯಗಳನ್ನು ಗಮನವಿಟ್ಟು ಕೇಳಿಸಿಕೊಳ್ಳಬೇಕು. ಹಾಗೂ ಸೂಕ್ತ ಪರಿಹಾರಕ್ಕೆ ಪ್ರಥಮ ಆದ್ಯತೆ ನೀಡಬೇಕು.
- **ಮಕ್ಕಳ ಪ್ರದೇಶ ಸಭೆ:** ಮಕ್ಕಳ ಗ್ರಾಮ ಸಭೆಗಳು ನಡೆಯುವಂತೆ, ಪಟ್ಟಣ, ನಗರ ಪ್ರದೇಶಗಳಲ್ಲಿ ಮಕ್ಕಳ ಪ್ರದೇಶ ಸಭೆಗಳನ್ನು ಕಡ್ಡಾಯವಾಗಿ ನಡೆಸಬೇಕು. ಈ ಸಭೆಯಲ್ಲಿ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು, ಜನಪ್ರತಿನಿಧಿಗಳು ತಪ್ಪದೇ ಹಾಜರಿದ್ದು ಮಕ್ಕಳಾದ ನಾವು ಹೇಳುವ ನಮ್ಮ ವಿಷಯಗಳನ್ನು, ಸಮಸ್ಯೆಗಳನ್ನು ಗಮನವಿಟ್ಟು ಕೇಳಿಸಿಕೊಂಡು, ಅದಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕು. ಅನೇಕ ಮಕ್ಕಳು ಜೀವನ ನಿರ್ವಹಣೆಗಾಗಿ ಕೆಲಸಕ್ಕೆ

ಹೋಗುವುದರಿಂದ ಎಲ್ಲಾ ದಿನಗಳಲ್ಲಿ, ಎಲ್ಲಾ ಸಮಯದಲ್ಲಿ ಈ ಸಭೆಗೆ ನಮಗೆ ಬರಲು ಸಾಧ್ಯವಾಗುವುದಿಲ್ಲ. ನಮ್ಮದೇ ಆದ ಸಮಸ್ಯೆಗಳನ್ನು, ವಿಷಯಗಳನ್ನು ಚರ್ಚಿಸಲು ನಮಗೆ ಸೂಕ್ತ ವೇದಿಕೆ ಬೇಕು.

- **ಸಮುದಾಯದಲ್ಲಿ ನಮ್ಮ ಸಮಸ್ಯೆಗಳಿಗೆ ಸ್ಪಂದಿಸುವ, ನಾವೇ ಆಯ್ಕೆ ಮಾಡಿಕೊಳ್ಳುವಂತಹ ಮಕ್ಕಳ ಮಿತ್ರ ವ್ಯವಸ್ಥೆ ಬೇಕು:** ನಮ್ಮಂತಹ ಮಕ್ಕಳ ಸಮಸ್ಯೆಗಳನ್ನು ಕೇಳಿಸಿಕೊಳ್ಳಲು, ಅವುಗಳ ಪರಿಹಾರಕ್ಕೆ ಸಹಕರಿಸಲು, ನಮ್ಮಂತಹ ಮಕ್ಕಳ ರಕ್ಷಣೆಗಾಗಿ ನಾವು ವಾಸಿಸುವ ಪ್ರದೇಶದಲ್ಲಿ/ಸಮುದಾಯದಲ್ಲಿಯೇ ವಾಸವಾಗಿರುವಂತಹ ಒಬ್ಬರು ವಯಸ್ಕರನ್ನು ನಾವೇ ತಯಾರಿಸಿದ ಮಾನದಂಡದ ಆಧಾರದ ಮೇಲೆ ನಾವೇ ಆಯ್ಕೆ ಮಾಡಿಕೊಳ್ಳುವಂತಹ 'ಮಕ್ಕಳ ಮಿತ್ರ' ವ್ಯವಸ್ಥೆ ಕುಂದಾಪುರ ತಾಲೂಕಿನಲ್ಲಿ ಈಗಾಗಲೇ ಇದೆ. ಇಂತಹ ವ್ಯವಸ್ಥೆ ರಾಜ್ಯದಾದ್ಯಂತ ಇರಬೇಕು ಹಾಗೂ ಆ ಮೂಲಕ ಮಕ್ಕಳ ಸ್ನೇಹಿ ವಾತಾವರಣ ನಿರ್ಮಾಣವಾಗಬೇಕು.
- **ಮದ್ಯಮಾರಾಟವನ್ನು ನಿಲ್ಲಿಸಬೇಕು:** ಹಳ್ಳಿಹಳ್ಳಿಗಳಲ್ಲಿ ನಡೆಯುತ್ತಿರುವ ಅಕ್ರಮ ಮದ್ಯಮಾರಾಟವನ್ನು ಗಂಭೀರವಾಗಿ ಪರಿಗಣಿಸಿ ಅದನ್ನು ಮೊಟ್ಟಮೊದಲು ನಿಲ್ಲಿಸುವಂತಾಗಬೇಕು. ಅಲ್ಲದೇ ಪೇಟೆಗಳಲ್ಲಿ ಇರುತ್ತಿದ್ದ ಬಾರ್‌ಗಳು ಈಗ ಹಳ್ಳಿ–ಹಳ್ಳಿಗೂ ಬಂದಿರುವುದರಿಂದಾಗಿ, ಮಹಿಳೆಯರಿಗೆ, ಹೆಣ್ಣುಮಕ್ಕಳಿಗೆ ಶಾಲಾ–ಕಾಲೇಜುಗಳಿಂದ, ಕೆಲಸ ಮುಗಿಸಿ ಹಿಂದಿರುಗುವಾಗ, ಸಂಜೆಯ ಸಮಯದ ನಂತರ ತಿರುಗಾಡಲು ಕಷ್ಟಕರವಾದ ಪರಿಸ್ಥಿತಿ ಇದೆ. ಅನೇಕ ಬಾರಿ ಇದರಿಂದಾಗಿ ಮಕ್ಕಳ ಅದರಲ್ಲೂ ಹೆಣ್ಣುಮಕ್ಕಳ, ಮಹಿಳೆಯರ ರಕ್ಷಣೆಗೆ ತುಂಬಾ ತೊಂದರೆಯಾಗುತ್ತದೆ. ಮನೆಗಳಲ್ಲಿ ಕುಡಿದು ಬಂದು ಪ್ರತಿನಿತ್ಯ ನಡೆಯುವ ಗಲಾಟೆಯಿಂದಾಗಿ ಶಾಲಾ–ಕಾಲೇಜುಗಳಿಗೆ ಹೋಗುತ್ತಿರುವ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆ, ಕೆಲಸಕ್ಕೆ ಹೋಗುವ ನಮ್ಮಂತಹ ಮಕ್ಕಳಿಗೆ ವಿಶ್ರಾಂತಿಯ ಸಮಸ್ಯೆ ಉಂಟಾಗುತ್ತದೆ. ಮಹಿಳೆಯರ–ಹೆಣ್ಣು ಮಕ್ಕಳ ಮೇಲೆ ದೈಹಿಕ ಹಾಗೂ ಲೈಂಗಿಕ ಶೋಷಣೆಗಳು ನಡೆಯುತ್ತವೆ. ಹೀಗಾಗಿ, ಮದ್ಯಮಾರಾಟವನ್ನು ನಿಷೇಧಗೊಳಿಸಬೇಕು. ಅದರಲ್ಲೂ ಅಕ್ರಮ ಮದ್ಯ ಮಾರಾಟವನ್ನು ಕಡ್ಡಾಯವಾಗಿ ತಡೆಹಿಡಿಯಬೇಕು. ಅಂತಹ ಮಾರಾಟದಲ್ಲಿ ತೊಡಗಿರುವವರಿಗೆ ಕಠಿಣ ಶಿಕ್ಷೆಯಾಗುವಂತಾಗಬೇಕು.
- **ನಾವು ವಾಸಿಸುವ ಸ್ಥಳ, ಶಾಲೆ, ಕೆಲಸ ಮಾಡುವ ಸ್ಥಳಗಳಲ್ಲಿ ಅಗತ್ಯ ವ್ಯವಸ್ಥೆಗಳು ಬೇಕು:** ಮನೆಗಳಲ್ಲಿ, ಶಾಲೆಗಳಲ್ಲಿ, ಕೆಲಸ ಮಾಡುವ ಸ್ಥಳಗಳಲ್ಲಿ ದಿನನಿತ್ಯಕ್ಕೆ ಅಗತ್ಯವಾದ ವ್ಯವಸ್ಥೆ ಇರುವಂತಾಗಬೇಕು. ನೀರು, ವಸತಿ, ಶೌಚಾಲಯ, ಆಹಾರ, ಕೆಲಸ ಮಾಡುವ ಸ್ಥಳದಲ್ಲಿ ಶುದ್ಧ ಕುಡಿಯುವ ನೀರು, ಪುರುಷ–ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ, ವಿಶ್ರಾಂತಿ ಕೊಠಡಿಗಳು, ಶಾಲೆಗೆ ಹೋಗುತ್ತಾ ದುಡಿಯುವ ಮಕ್ಕಳಿಗೆ ಶಿಕ್ಷಣಕ್ಕೆ ಅಗತ್ಯ ಪಠ್ಯ–ಪುಸ್ತಕ, ಇತರ ವಸ್ತುಗಳು, ಸಂಚಾರಕ್ಕೆ ಅಗತ್ಯವಾದ ರಸ್ತೆ, ಬಸ್ ವ್ಯವಸ್ಥೆ, ಆರೋಗ್ಯಕ್ಕೆ ಅಗತ್ಯವಾದ ವ್ಯವಸ್ಥೆಗಳು, ಸಮೀಪದಲ್ಲಿ ಸರ್ಕಾರಿ ಆಸ್ಪತ್ರೆಗಳು ಸಿಗುವಂತಾಗಬೇಕು. ಅಲ್ಲದೇ ನಮ್ಮಂತಹ ದುಡಿಯುವ ಮಕ್ಕಳಿಗಾಗಿ ಪ್ರತ್ಯೇಕ ಫ್ಲೆಕ್ಸಿ ಶಾಲೆಗಳು ಇರಬೇಕು (ನಮ್ಮ ಸಮಯ, ನಮಗೆ ಬೇಕಾದ ಮಾಹಿತಿ, ಶಿಕ್ಷಣ, ಕಲಿಕೆಗಳಿಗೆ ಸರಿಯಾಗಿ)
- **ಬಾಲ್ಯ ವಿವಾಹ ಪದ್ಧತಿ ಸಂಪೂರ್ಣವಾಗಿ ನಿಲ್ಲುವಂತಾಗಬೇಕು:** ಸಂಪ್ರದಾಯಕ್ಕೆ, ಮನೆಯ ಆರ್ಥಿಕ ಪರಿಸ್ಥಿತಿಯಿಂದಾಗಿ ಇನ್ನೂ ಹಲವೆಡೆಗಳಲ್ಲಿ ಹೆಚ್ಚಾಗಿ ಉತ್ತರ ಕರ್ನಾಟಕದ ಜಿಲ್ಲೆಗಳ ಜನ ಸಮುದಾಯದಲ್ಲಿ ನಡೆಯುತ್ತಿರುವ ಬಾಲ್ಯ ವಿವಾಹಗಳು ಸಂಪೂರ್ಣವಾಗಿ ನಿಲ್ಲುವಂತಾಗಬೇಕು. ಈ ಬಗ್ಗೆ, ಅಧಿಕಾರಿಗಳು ಸೂಕ್ಷ್ಮತೆ ಬೆಳೆಸಿಕೊಳ್ಳಬೇಕು ಹಾಗೂ ಎಲ್ಲೆಡೆ ಮನಮುಟ್ಟುವಂತೆ, ಪ್ರಮುಖವಾಗಿ ಇದರಿಂದಾಗಿ ಮಕ್ಕಳ ಮೇಲಾಗುವ ಪರಿಣಾಮದ ಬಗ್ಗೆ ಜಾಗೃತಿ ಉಂಟುಮಾಡಬೇಕು.

**ಈ ಎಲ್ಲಾ ಹಕ್ಕೊತ್ತಾಯಗಳೊಂದಿಗೆ ವಲಸೆ ಕಾರ್ಮಿಕರ ಮಕ್ಕಳು ಇನ್ನೂ ಕೆಲವು ತಮ್ಮದೇ ಆದ ವಿಷಯಗಳನ್ನು ಇದರೊಂದಿಗೆ ಮಂಡಿಸಿದ್ದಾರೆ. ಅವು ಈ ಕೆಳಗಿನಂತಿವೆ:**

**ವಲಸೆ ಕಾರ್ಮಿಕರ ಮಕ್ಕಳ ಬೇಡಿಕೆಗಳು:**

- ಕೆಲಸವನ್ನು ಹುಡುಕಿಕೊಂಡು ನಮ್ಮ ಊರಿನಿಂದ ಬೇರೆ ಊರಿಗೆ ವಲಸೆ ಬರುವ ನಮ್ಮ ಕುಟುಂಬಗಳು ಹಲವಾರು ವರ್ಷಗಳಿಂದ ವಲಸೆ ಬಂದಂತಹ ಊರಿನಲ್ಲಿಯೇ ವಾಸವಾಗಿದ್ದಾರೆ. ನಮ್ಮನ್ನು ಈ ಊರಿನ ನಾಗರಿಕರೆಂದು ಗುರುತಿಸಬೇಕು.
- ಹೀಗೆ ವಲಸೆ ಬಂದ ನಮ್ಮಂತಹ ಎಷ್ಟೋ ಕುಟುಂಬಗಳಿಗೆ ಮನೆ, ಶೌಚಾಲಯ, ಕುಡಿಯುವ ನೀರು, ವಿದ್ಯುತ್, ರಸ್ತೆ, ಬಸ್ ವ್ಯವಸ್ಥೆ, ದಾರಿದೀಪ, ಒಳಚರಂಡಿ ವ್ಯವಸ್ಥೆ ಮುಂತಾದ ಯಾವುದೇ ಸೌಲಭ್ಯವಿಲ್ಲದೇ ಜೋಪಡಿಗಳಲ್ಲಿ ವಾಸಿಸುತ್ತಿದ್ದೇವೆ. ನಮ್ಮ ದಿನನಿತ್ಯದ ಜೀವನಕ್ಕೆ ಅಗತ್ಯವಾದ ಈ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಡಬೇಕು.

- ಶಾಲೆಗೆ ಸೇರಿಸುವಾಗ ನಮ್ಮಂತಹ ಮಕ್ಕಳ ಹೆಸರಿನಲ್ಲಿ, ಜಾತಿಯಲ್ಲಿ ಯಾವುದಾದರೂ ಸಣ್ಣಪುಟ್ಟ ತಪ್ಪಾಗಿದ್ದರೆ ಅದರ ತಿದ್ದುಪಡಿಗಳನ್ನು ಸ್ಥಳೀಯವಾಗಿ ಸರಿಪಡಿಸಲು ಸರಳ ನಿಯಮಗಳನ್ನು ರೂಪಿಸಬೇಕು.
- ತಂದೆ-ತಾಯಿಯರು ಕೆಲಸ ಮಾಡುವ ಪ್ರದೇಶದಲ್ಲಿ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ಸೂಕ್ತ ವ್ಯವಸ್ಥೆ ರೂಪಿಸಬೇಕು.
- ದೂರವಿರುವ ಶಾಲೆಗಳಿಗೆ ಮಕ್ಕಳಾದ ನಾವು ಹೋಗುವ ಸಂದರ್ಬದಲ್ಲಿ ಸೂಕ್ತ ವಾಹನ ವ್ಯವಸ್ಥೆ ಒದಗಿಸಬೇಕು.
- ನಾವು ವಾಸಿಸುತ್ತಿರುವ ಪ್ರದೇಶದ ಸಮೀಪದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇರಬೇಕು. ಆರೋಗ್ಯಕ್ಕೆ ಸಂಬಂಧಿಸಿದ ಸೌಲಭ್ಯಗಳು ಹಾಗೂ ವಿಮೆಯನ್ನು ನಮಗೆ ಒದಗಿಸಬೇಕು.
- ವಲಸೆ ಕಾರ್ಮಿಕರ ಮಕ್ಕಳಾದ ನಮಗೆ ಶಿಕ್ಷಣ – ಅಂಗನವಾಡಿ, ಶಾಲೆ, ರಕ್ಷಣೆ, ಸೂಕ್ತ ಪೌಷ್ಟಿಕ ಆಹಾರ, ಹಾಸ್ಟೆಲ್ ಮತ್ತು ವಸತಿ ಶಾಲೆಗಳ ಪ್ರವೇಶಕ್ಕೆ ಮೊದಲ ಆಧ್ಯತೆ ನೀಡಬೇಕು.
- ನಮ್ಮ ವಿದ್ಯಾಭ್ಯಾಸಕ್ಕೆ ಸಹಾಯವಾಗುವಂತೆ ವಿದ್ಯಾರ್ಥಿ ವೇತನ ಸಿಗುವಂತಾಗಬೇಕು.
- ಆಗಾಗ ನಮ್ಮ ಆರೋಗ್ಯ ತಪಾಸಣೆಗಾಗಿ ಆರೋಗ್ಯ ಕಾರ್ಯಕರ್ತೆಯರು ನಾವು ವಾಸಿಸುತ್ತಿರುವ ಸ್ಥಳಕ್ಕೆ ಭೇಟಿ ನೀಡಿ ಕಾಲಕಾಲಕ್ಕೆ ಅಗತ್ಯ ಸೇವೆ ನೀಡಬೇಕು
- ವಲಸೆ ಕಾರ್ಮಿಕರ ಮಕ್ಕಳಾದ ನಮಗೆ ಋತುಮಾನ ಶಾಲೆಗಳನ್ನು ಪ್ರಾರಂಭಿಸಬೇಕು. ಅಲ್ಲದೇ ನಮ್ಮ ಜೀವನ ನಡೆಸಲು ಅಗತ್ಯವಿರುವ ಕೌಶಲ್ಯ ಸಿಗುವಂತಹ ಶಿಕ್ಷಣ ನಮಗೆ ಬೇಕು.
- ನಮ್ಮ ಪೋಷಕರು ಸ್ವಂತ ಊರಿಗೆ ಹೋದಾಗ, ಶಾಲೆಗೆ ಹೋಗುವ, ಕೆಲಸಕ್ಕೆ ಹೋಗುವ ನಮಗೆ ತೊಂದರೆಯಾಗದಂತೆ ಉಳಿದುಕೊಳ್ಳಲು ವಸತಿ & ಊಟಕ್ಕೆ ಸೂಕ್ತ ವ್ಯವಸ್ಥೆ ಬೇಕು.
- ಬಾಲ್ಯ ವಿವಾಹದಿಂದುಂಟಾಗುವ ಸಮಸ್ಯೆಗಳು, ಸ್ವಚ್ಛತೆಯ ಅಗತ್ಯತೆ, ಶಿಕ್ಷಣದ ಮಹತ್ವ, ಪೌಷ್ಟಿಕ ಆಹಾರದ ಅಗತ್ಯತೆ, ಆರೋಗ್ಯದ ಮಹತ್ವ, ವರದಕ್ಷಿಣೆ, ಧೂಮಪಾನ-ಮದ್ಯಪಾನದಿಂದುಂಟಾಗುವ ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ನಾವು ವಾಸಿಸುವ ಪ್ರದೇಶಗಳಲ್ಲಿ ಹಮ್ಮಿಕೊಳ್ಳಬೇಕು.
- ವಲಸೆ ಕಾರ್ಮಿಕರ ಮಕ್ಕಳಾದ ನಮ್ಮ ಅಭಿವೃದ್ಧಿಗೆ ರಾಜ್ಯ-ಜಿಲ್ಲೆಯ ಬಜೆಟ್‌ನಲ್ಲಿ ವಿಶೇಷ ಅವಕಾಶವಿರಬೇಕು. ಅದಕ್ಕೆ ಸರಿಯಾಗಿ ನಮ್ಮೊಂದಿಗೆ ಚರ್ಚಿಸಿ, ನಮ್ಮ ಅಭಿಪ್ರಾಯದಂತೆ ಅಗತ್ಯವಿರುವ ಕಾರ್ಯಕ್ರಮ-ಯೋಜನೆ ಹಮ್ಮಿಕೊಳ್ಳಬೇಕು.
- ವಲಸೆ ಕಾರ್ಮಿಕರ ಮಕ್ಕಳಾದ ನಮಗೆ ನಮ್ಮದೇ ಆದ ಕಾರ್ಯಕ್ರಮಗಳು, ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಯಾವುದೇ ಸ್ಥಳಾವಕಾಶವಿಲ್ಲ. ಹೀಗಾಗಿ ನಾವು ಒಟ್ಟಾಗಿ ಮಾತುಕತೆ ನಡೆಸಲು, ನಮ್ಮ ಬೆಳವಣಿಗೆಗೆ ಸಹಾಯಕವಾದ ಚಟುವಟಿಕೆ ನಡೆಸಲು ಪ್ರತ್ಯೇಕ ಸ್ಥಳಾವಕಾಶ, ವೇದಿಕೆಗಳು ಬೇಕು.
- ಅಂಗವೈಕಲ್ಯತೆ ಇರುವವರಿಗೆ ಅವರ ಆರೋಗ್ಯ, ರಕ್ಷಣೆ, ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ವ್ಯವಸ್ಥೆ, ಯೋಜನೆ ಮತ್ತು ನೀತಿ ಇರಬೇಕು.
- ನಮ್ಮ ಪೋಷಕರು, ನಾವು ಕೆಲಸ ಮಾಡುವ ಸ್ಥಳಗಳಲ್ಲಿ ನಮಗೆ ಅತ್ಯಗತ್ಯವಾಗಿ ನೀರು, ಶುದ್ಧ ಕುಡಿಯುವ ನೀರು, ಪೌಷ್ಟಿಕ ಆಹಾರ, ಪುರುಷರು-ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ, ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ಶಿಶು ಮಂದಿರಗಳು ಮುಂತಾದವುಗಳ ವ್ಯವಸ್ಥೆ ಇರಬೇಕು.
- ಅನೇಕ ಬಾರಿ ಮನೆಯಲ್ಲಿರುವ ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವ ಸಲುವಾಗಿ ಹೆಣ್ಣು ಮಕ್ಕಳನ್ನು ಶಾಲೆ ಬಿಡಿಸುತ್ತಾರೆ. ಚಿಕ್ಕವರಿರುವಾಗಲೇ ಕುಟುಂಬದ ಜವಾಬ್ದಾರಿಯನ್ನು ಕಡಿಮೆ ಮಾಡಿಕೊಳ್ಳಲು ಮದುವೆ ಮಾಡಿಬಿಡುತ್ತಾರೆ. ಇವುಗಳನ್ನು ತಪ್ಪಿಸಲು ಪ್ರಮುಖವಾಗಿ ಹೆಣ್ಣು ಮಕ್ಕಳಿಗೆ ಅವರ ಆರೋಗ್ಯ, ರಕ್ಷಣೆ, ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ವ್ಯವಸ್ಥೆ, ಯೋಜನೆ ಮತ್ತು ನೀತಿ ಇರಬೇಕು.
- ರಾಜ್ಯದಾದ್ಯಂತ ವಾಸವಾಗಿರುವ ಲಕ್ಷಾಂತರ ವಲಸೆ ಕಾರ್ಮಿಕರನ್ನು ಗಮನದಲ್ಲಿಟ್ಟುಕೊಂಡು, ವಲಸೆ ಕಾರ್ಮಿಕ ಕುಟುಂಬಗಳಿಗೆ, ಈ ಸಮುದಾಯದ ಮಹಿಳೆಯರಿಗೆ, ಮಕ್ಕಳಿಗೆ ರಾಜ್ಯಮಟ್ಟದ ಪ್ರತ್ಯೇಕ ವಿಶೇಷ ನೀತಿ-ನಿಯಮ ರೂಪಿಸುವುದು.

ಭೀಮಾ ಸಂಘದ ಪರವಾಗಿ